

ಫೋಟೊ: ಎಸ್.ಕೆ. ದಿನೇಶ್

ಸ್ವಾತಂತ್ರ್ಯ ಪೂರ್ವ ಕಾಲಘಟ್ಟದಿಂದ ಇಲ್ಲಿಯವರೆಗೂ ‘ಕನ್ನಡ ಚಳವಳಿ’ ಎನ್ನುವುದು ಕೆಲವೊಮ್ಮೆ ಮಂಕಾಗಿ, ಮತ್ತೆ ಕೆಲವು ಬಾರಿ ಜ್ವಾಜಲ್ಯಮಾನವಾಗಿ ಪ್ರಕಾಶಿಸುತ್ತಿದೆ. ಕನ್ನಡ ನಾಡು–ನುಡಿಯ ಬಿಕ್ಕಟ್ಟುಗಳಿಗೆ ಉತ್ತರಗಳನ್ನು ಹುಡುಕುತ್ತಾ, ಕನ್ನಡ–ಕರ್ನಾಟಕದ ಅಸ್ಮಿತೆಯನ್ನು ಎತ್ತಿಹಿಡಿಯುವ ಕೆಲಸದಲ್ಲಿ ಚಳವಳಿ ತೊಡಗಿಕೊಂಡಿದೆ. ಕರ್ನಾಟಕ ಏಕೀಕರಣ, ಕಾವೇರಿ ನದಿ ನೀರು ಹಂಚಿಕೆ, ಗೋಕಾಕ್ ಚಳವಳಿ, ಡಬ್ಬಿಂಗ್ ವಿರೋಧ–ಪರ ಹೋರಾಟಗಳು ಸೇರಿದಂತೆ ಹಲವು ರೂಪಗಳಲ್ಲಿ ಗುರ್ತಿಸಬಹುದಾದ ‘ಕನ್ನಡ ಚಳವಳಿ’ ವರ್ತಮಾನದಲ್ಲಿ ಗ್ರಾಹಕರ ಹಕ್ಕಿನ ಸ್ವರೂಪವನ್ನೂ, ಕನ್ನಡದ ರಾಷ್ಟ್ರೀಯತೆಯ ಪರಿಕಲ್ಪನೆಯನ್ನೂ, ಕರ್ನಾಟಕದ ಏಳಿಗೆಯ ಮೂಲಕ ದೇಶದ ಏಳಿಗೆ ಸಾಧ್ಯ ಎನ್ನುವ ನಂಬಿಕೆಯನ್ನೂ ಹೊಂದುವ ಮೂಲಕ ಹೊಸ ಸ್ವರೂಪವನ್ನು ಪಡೆದುಕೊಂಡಿದೆ. ‘ಕರ್ನಾಟಕ ಸುವರ್ಣ ಮಹೋತ್ಸವ’ ಸಂದರ್ಭದ ಈ ಚಳವಳಿಗಳ ಕಥನವನ್ನು– ‘ಹಚ್ಚೇವು ಚಳವಳಿಗಳ ದೀಪ’ವನ್ನು– ಕಾಳಜಿ ಮತ್ತು ಅಭಿಮಾನದಿಂದ ‘ಸುಧಾ’ ಸಹೃದಯರ ಮುಂದಿಡುತ್ತಿದೆ.

**ಆನಂದ್ ಜಿ.**
ಲೇಖಕರು ಸಮಕಾಲೀನ ಕನ್ನಡ ಚಳವಳಿಗೆ ಬೌದ್ಧಿಕ ಹಾಗೂ ತಾತ್ವಿಕ ಆಯಾಮ ರೂಪಿಸಲು ಪ್ರಯತ್ನಿಸುತ್ತಿರುವ ಉತ್ಸಾಹಿಗಳಲ್ಲೊಬ್ಬರು